ಸೋಮವಾರಪೇಟೆ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ

ಸಿ.ಸಿ.ನಂ. 40/2026

ಪಿರ್ಯಾದಿಃ ಸೋಮವಾರಪೇಟೆ ಪೋಲೀಸ್ ಠಾಣೆ

ಃ ವಿ ಃ

ಆರೋಪಿಃ ರವಿ ಅಲಿಯಾಸ್ ರವಿಚಂದ್ರ ಬಿ.ಎಸ್.

ಆಪಾದನೆ

ಶ್ರೀ. ಶ್ರೀನಾಥ ಜೆ.ಎನ್ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾ ದಂಡಾಧಿಕಾರಿಗಳು, ಸೋಮವಾರಪೇಟೆ, ಆದ ನಾನು ನಿಮ್ಮ ಮೇಲೆ ಅಂದರೆ

ಆರೋಪಿಃ ರವಿ ಅಲಿಯಾಸ್ ರವಿಚಂದ್ರ ಬಿ.ಎಸ್. ತಂದೆಃ ದಿ. ಶೇಷಪ್ಪ.
50 ವರ್ಷ, ವಿಶ್ವೇಶ್ವರಯ್ಯ,
ಸೋಮವಾರಪೇಟೆ ತಾಲ್ಲೂಕು, ಕೊಡಗು.

ಈ ಕೆಳಗಿನಂತೆ ಆಪಾದನೆಯನ್ನು ಹೊರೆಸಿದ್ದೇನೆ.

ದಿನಾಂಕ 25.11.2025ರಂದು ಸಂಜೆ 11.30ರ ಸಮಯದಲ್ಲಿ ಸೋಮವಾರಪೇಟೆ ಠಾಣಾ ಸರಿಹದ್ದಿನ ಸೋಮವಾರಪೇಟೆ ಕಡೆಯಿಂದ ಮಡಿಕೇರಿ ಕಡೆಗೆ ಹಾದು ಹೋಗಿರುವ ರಾಜ್ಯ ಹೆದ್ದಾರಿ ನಗರೂರು ಗ್ರಾಮದ ಸಾರ್ವಜನಿಕ ರಸ್ತೆಯಲ್ಲಿ ಆರೋಪಿಯಾದ ನೀವು ಕೆಎ-12-ಸಿ-0555 ರ ಪಿಕಪ್ ವಾಹನವನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬರುತ್ತಿರುವಾಗ ಪಿಕಪ್ ವಾಹನದ ಟೈಯರ್ ಒಡೆದು ಪಿಕಪ್ ವಾಹನವು ನಿಯಂತ್ರಣ ತಪ್ಪಿ ಮಗುಚಿಕೊಂಡಿದ್ದರಿಂದ ಆ ಮೂಲಕ ಆರೋಪಿಯ ಪರವಾಗಿ ನಿಮ್ಮ ಈ ಕ್ರಮ ಭಾ.ನ್ಯಾ.ಸಂ.ಕಲಂ 281ರನ್ವಯ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹ ಅಪರಾಧವಾಗಿದೆ.

ಎರಡನೆಯದಾಗಿ, ಅದೇ ದಿನ, ಅದೇ ಸಮಯ ಹಾಗೂ ಅದೇ ಜಾಗದಲ್ಲಿ ಸದರಿ ವಾಹನವನ್ನು ಆರೋಪಿಯಾದ ನೀನು ಸದರಿ ವಾಹನವನ್ನು ರಸ್ತೆಯಲ್ಲಿ ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಪಿಕಪ್ ಮಗುಚಿಕೊಂಡ ಪರಿಣಾಮ ಚಾಸಾ-6 ರವರಿಗೆ ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿದ್ದು, ಆರೋಪಿಯ ಪರವಾಗಿ ನಿಮ್ಮ ಈ ಕ್ರಮ ಭಾ.ನ್ಯಾ.ಸಂ.ಕಲಂ 125(ಎ) ರನ್ವಯ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹ ಅಪರಾಧವಾಗಿದೆ.

ಮೂರನೆಯದಾಗಿ, ಅದೇ ದಿನ, ಅದೇ ಸಮಯ ಹಾಗೂ ಅದೇ ಜಾಗದಲ್ಲಿ ಸದರಿ ವಾಹನವನ್ನು ಆರೋಪಿಯಾದ ನೀನು ಸದರಿ ವಾಹನವನ್ನು ರಸ್ತೆಯಲ್ಲಿ ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಪಿಕಪ್ ಮಗುಚಿಕೊಂಡ ಪರಿಣಾಮ ಚಾಸಾ-1 ರಿಂದ 5 ರವರಿಗೆ ತೀವ್ರ ಸ್ವರೂಪದ ಗಾಯವನ್ನುಂಟು ಮಾಡಿದ್ದು, ಆರೋಪಿಯ ಪರವಾಗಿ ನಿಮ್ಮ ಈ ಕ್ರಮ ಭಾ.ನ್ಯಾ.ಸಂ.ಕಲಂ 125(ಬಿ) ರನ್ವಯ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹ ಅಪರಾಧವಾಗಿದೆ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ).

ದಿ: 01.07.2026

ಸಹಿ/-
(ಶ್ರೀ.ಶ್ರೀನಾಥ.ಜೆ.ಎನ್)
ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ..ದಂ.,ಸೋಮವಾರಪೇಟೆ.